ಅಸಲು ದಾವೆ ಸಂಖ್ಯೆ - 211/2015
ಡಿ.ಡಬ್ಲ್ಯು - 01
ದಿನಾಂಕಃ 06-02-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್ ಡಿ ಎಮ್ ವಕೀಲರಿಂದ**

ನಿಮ್ಮ ತಂದೆಯವರ ಆಸ್ತಿಯಾದ ಲಾಲಶಾಗಟ್ಟಿಯಲ್ಲಿ ಆಸ್ತಿ ನಂ. 210 ರಲ್ಲಿರುವ ಮನೆಯು ದುರಸ್ತಿಯಾಗಿ ಮನೆಯನ್ನು ಕಟ್ಟಿರುತ್ತೀರಿ ಎಂದರೆ, ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಆಸ್ತಿ ನಂ. 210 ರಲ್ಲಿ ದಾವೆ ಹೂಡುವ ಕಾಲಕ್ಕೆ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದೀರಿ ಎಂದು ಮಾಹಿತಿ ಇದ್ದರು ಸಹ ಇಲ್ಲ ಎಂದು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಸದರಿ ಆಸ್ತಿ ನಂ. 210 ಬಿದಿದ್ದರಿಂದ, ಅದನ್ನು ಸರಿಪಡಿಸುವ ತನಕ ವಾಸ ಮಾಡಲು ವಾದಿಯರಿಂದ ದಾವಾ ಆಸ್ತಿಯಲ್ಲಿ ವಾಸವಾಗಿರುವುದಕ್ಕೆ ಅನುಮತಿ ಪಡೆದುಕೊಂಡಿರುತ್ತೀರಿ ಎಂದರೆ ಸುಳ್ಳು ಇರುತ್ತದೆ. ದಾವಾ ಪೂರ್ವದಲ್ಲಿ ನೀವು ಮನೆಯನ್ನು ಸರಿಪಡಿಸಿಕೊಂಡು ಹೋಗಿದ್ದರು ಸಹ ವಾದಿಯು ನಿಮಗೆ ನೀಡಿದ್ದ ದಾವಾ ಆಸ್ತಿಯನ್ನು ಖಾಲಿ ಮಾಡದೆ ಇದ್ದುದ್ದರಿಂದ ವಾದಿಯು ದಿನಾಂಕಃ 01-07-2015 ರಂದು ವಾದಿಯ ವಕೀಲರ ಮುಖಾಂತರ ನಿಮ್ಮ ತಂದೆಗೆ ದಾವಾ ಆಸ್ತಿಯನ್ನು ಖಾಲಿ ಮಾಡಿ ಕೊಡುವಂತೆ ನೋಟಿಸ ನೀಡಿದ್ದರು ಎಂದರೆ ಸುಳ್ಳು. ಸದರಿ ನೋಟಿಸ ನೀಡಿದ್ದರು ಸಹ ದಾವಾ ಆಸ್ತಿಯನ್ನು ನಿಮ್ಮ ತಂದೆಯವರು ಖಾಲಿಯು ಮಾಡಿರುವುದಿಲ್ಲ ಮತ್ತು ಸದರಿ ನೋಟಿಸಗೆ ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸುಳ್ಳು. ಈ ಕಾರಣಕ್ಕಾಗಿ ನಿಮ್ಮ ತಂದೆಯವರು ದಾವಾ ಆಸ್ತಿಯನ್ನು ಖಾಲಿ ಮಾಡಿ ಕೊಡಿಸುವಂತೆ ಪರಿಹಾರ ಕೇಳಿ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಖಾಲಿ ಮಾಡಿಕೊಡಿಸುವಂತೆ ಹೂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯಲ್ಲಿ ನಿಮಗೆ ಹಕ್ಕು ಇಲ್ಲದಿದ್ದರು ಸಹ ಅಧಿಕಾರಿಗಳೊಂದಿಗೆ ಶಾಮೀಲಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಿಮ್ಮ ತಂದೆಗೆ ಯಾವ ದಾಖಲೆ ಆಧಾರದ ಮೇಲೆ ಬಂದಿತ್ತು ಎಂದು ತೋರಿಸಲು ನೀವು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಿಮ್ಮ ತಂದೆಯ ಹೆಸರು ಖೊಟ್ಟಿಯಾಗಿ ದಾಖಲಿಸಿ ಕೊಂಡು ಸದರಿ ದಾಖಲೆ ದುರುಪಯೋಗ ಪಡಿಸಿಕೊಂಡು ಖೊಟ್ಟಿಯಾಗಿ ಸದರಿ ಆಸ್ತಿಯನ್ನು ನಿಮ್ಮ ಹೆಸರಿಗೆ ಭಕ್ಷಿಸ ಮುಖಾಂತರ ಹಸ್ತಾಂತರಿಸಿರುತ್ತಾರೆ ಎಂದರೆ ಅದು ನಮ್ಮ ತಂದೆಯ ಆಸ್ತಿ ಆದ್ದರಿಂದ ಅವರು

ನನಗೆ ನೀಡಿರುತ್ತಾರೆ.

ದಾವಾ ಆಸ್ತಿಯು ಮನ್ಸಿಪಲ್ ಆಸ್ತಿ ನಂ. 227 ರ ಒಂದು ಭಾಗ ಎಂದರೆ ನಮ್ಮ ಆಸ್ತಿ 227/1 ಇರುತ್ತದೆ. ದಾವಾ ಆಸ್ತಿಯು 227/1 ಕ್ಕೆ ಸಂಬಂಧಪಟ್ಟಂತೆ ಅದು ಈ ಮೊದಲು ಯಾರ ಹೆಸರಿನಲ್ಲಿ ಇತ್ತು, ನಿಮ್ಮ ತಂದೆಯ ಹೆಸರಿಗೆ ಹೇಗೆ ಬಂದಿತ್ತು, ಪೋಡಿ ಆಗಿರುವ ಬಗ್ಗೆ ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಗಳು ಇರುತ್ತವೆ ಅದನ್ನು ಹಾಜರುಪಡಿಸಿದ್ದೇನೆ. ನೀವು ಹಾಜರುಪಡಿಸಿದ ದಾಖಲೆಗಳಲ್ಲಿ ದಾವಾ ಆಸ್ತಿಯ ಮಾಲ್ಕಿಯ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ, ಹಾಜರುಪಡಿಸಿರುತ್ತೇನ.

ದಾವಾ ಆಸ್ತಿಯ ವಾದಿಯರ ಮಾಲ್ಕಿ ಆಸ್ತಿ ಇದ್ದು ದಾವಾ ಆಸ್ತಿಯ ಹಕ್ಕು ಬಿಟ್ಟು ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಸಲ್ಲಿಸಿರತಕ್ಕ ದಾಖಲಾತಿಗಳಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಳೆಯ ದಾವಾಗಳಿಂದ ನಿಮಗೆ ಮತ್ತು ನಿಮ್ಮ ತಂದೆಗೆ ಮಾಲ್ಕಿ ಹಕ್ಕು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜಾ ಬಿಟ್ಟು ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.